ಚಿಕ್ಕಪೇಟೆ ವಿಧಾನ ಸಭಾ ಕ್ಷೇತ್ರದ ಹೊಂಬೇಗೌಡ ನಗರ ವಾರ್ಡ್ – 145 ರಲ್ಲಿ ವಾರ್ಡ್ ಸಮಿತಿ ಸಭೆಯನ್ನು ಶ್ರೀಮತಿ.ಲಕ್ಷ್ಮೀದೇವಿ ಉಪ ಆಯುಕ್ತರು ಕಂದಾಯ(ದಕ್ಷಿಣ), ನೋಡಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರ ಅಪ್ಪಣೆ ಮೇರೆಗೆ ದಿನಾಂಕ: 21.11.2020 ರಂದು ಶನಿವಾರ ಮಧ್ಯಾಹ್ನ 3.00 ಗಂಟೆಗೆ ವಾರ್ಡ್ ಕಮಿಟಿ ಸಭೆಯನ್ನು ಕರೆಯಲಾಗಿದ್ದು ವಾರ್ಡ್ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಸಭೆಗೆ ಆಗಮಿಸಿರುವ ಸಮಿತಿ ಸದಸ್ಯರಿಗೆ ಆಹ್ವಾನ ನೀಡಿದ್ದು ಸಭೆಗೆ ಹಾಜರಾಗಿರುವ ಸದಸ್ಯರಿಗೆ ಸ್ವಾಗತ ಕೋರುತ್ತಾ ಸಭೆಯ ವಾರ್ಡ್ ಸಮಿತಿ ಅಧ್ಯಕ್ಷರಾದ ಶ್ರೀಮತಿ.ಲಕ್ಷ್ಮೀದೇವಿ ರವರ ಅಧ್ಯಕ್ಷತೆಯೊಂದಿಗೆ ಸಭೆಯನ್ನು ನಡೆಸಲಾಯಿತು.

| ಹಾಜರಿದ್ದವರು | ಗೈರು ಹಾಜರಾತಿ |
|---|---|
| 1) ಉಪ ಆಯುಕ್ತರು (ದಕ್ಷಿಣ) ವಾರ್ಡ್ 145 ನೋಡಲ್ ಅಧಿಕಾರಿ.<br>2) ವಾರ್ಡ್ 145 ಕ್ಕೆ ಸಂಬಂಧಪಟ್ಟಂತ ARO,JE,AE,Assessor, HI, TI, Horticulture, Forest, BWSSB & Police Department<br>3) ಶುಚಿ ಮಿತ್ರ ಸಂಘದ ಸದಸ್ಯರು ಹಾಗೂ ನಾಗರಿಕ ಕಲ್ಯಾಣ ಸಂಘದ ಸದಸ್ಯರು. | 1) AEE BESCOM |

•• •• ••

1. ಮೊದಲಿಗೆ ಸುಮಾರು 20 ವರ್ಷಗಳಿಂದ ಸ್ವಚ್ಛಗೊಳಿಸಲಾಗದೆ ಕಸದ ರಾಶಿ ಇದ್ದಂತ ಕೊಳದ ಮಠ ಸಿದ್ದಯ್ಯ ರಸ್ತೆಯ ಬ್ಲಾಕ್ ಸ್ಪಾಟ್ ಅನ್ನು ನಮ್ಮ ಕರೋನಾ ವಾರಿಯರ್ಸ್ ಗಳಾದ ಪೌರ ಕಾರ್ಮಿಕರ ಮುಖಾಂತರ ತಂಡದ ಎಲ್ಲಾ ಸದಸ್ಯರುಗಳು ಒಟ್ಟಾಗಿ ಸೇರಿ ಈ ಒಂದು ಬ್ಲಾಕ್ ಸ್ಪಾಟ್ ಅನ್ನು ತೆರವುಗೊಳಿಸಿ ಸ್ವಚ್ಛ ಮಾಡಲಾಯಿತು.
2. ವಾರ್ಡ್ –145 ರಲ್ಲಿನ 11 ಬ್ಲಾಕ್ ಸ್ಪಾಟ್‌ಗಳನ್ನು ಸ್ವಚ್ಛಗೊಳಿಸಲಾಗಿರುತ್ತದೆ ಈ ಒಂದು ಯಶಸ್ವಿ ಕಾರ್ಯಕ್ಕೆ ಶ್ರಮಿಸಿದ ತಂಡದ ಎಲ್ಲಾ ಸದಸ್ಯರಿಗೆ ಹಾಗೂ ಪೌರಕಾರ್ಮಿಕರಿಗೆ ಸಭೆಯಲ್ಲಿ ಅಭಿನಂದನೆಗಳನ್ನು ತಿಳಿಸಿದರು.
3. ಸಾರ್ವಜನಿಕರು ಕಸ ತಂದು ರಸ್ತೆಗೆ ಬಿಸಾಡಿದರೆ ಅದಕ್ಕೆ ಒಳಪಡುವಂತಹ ದಂಡಗಳು/ಶಿಕ್ಷೆಗಳನ್ನು ಸೆಕ್ಷನ್ ಮೂಲಕ ಪ್ರಚುರ ಪಡಿಸಲು ಗುತ್ತಿಗೆದಾರರಿಗೆ ಸೂಚಿಸಲಾಯಿತ್ತು.
4. ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿರುವಂತ ಪಾಟ್ ಹೋಲ್ಸ್‌ಗಳನ್ನು ಮುಚ್ಚಲು ಸಂಬಂಧಪಟ್ಟಂತ AEE ರವರಿಗೆ ಅಗತ್ಯ ಕ್ರಮ ವಹಿಸಲು ಸೂಚಿಸಲಾಯಿತ್ತು.
5. ಗುಪ್ತ ಲೇಔಟ್ 2ನೇ ಕ್ರಾಸ್‌ನಲ್ಲಿ ಕಾಡು ಮರಗಳಿರುವುದರಿಂದ ಮರಗಳ ರಂಬೆ ಮತ್ತು ಕೊಂಬೆಗಳನ್ನು ಟ್ರಿಮ್ ಮಾಡುವುದರ ಬಗ್ಗೆ ಗಮನ ಹರಿಸುವುದು.
6. ಸ್ಟ್ರೀಟ್ ಲೈಟ್‌ಗಳಿಗೆ Automatic Timer ಅಳವಡಿಸುವುದು.
7. ಗುಪ್ತ ಲೇಔಟ್ ರಸ್ತೆಗಳಲ್ಲಿ Sweeping ಕಾರ್ಯ ಸರಿಯಾಗಿ ನಿರ್ವಹಿಸುತ್ತಿಲ್ಲವೆಂದು ತಿಳಿಸಿರುತ್ತಾರೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿರವರು ಸೂಕ್ತ ಗಮನ ಹರಿಸಲು ಸೂಚಿಸಿದೆ.

Scanned with CamScanner

8. ಎಲ್ಲಾ ಬ್ಲಾಕ್ ಸ್ಪಾಟ್‌ಗಳಲ್ಲಿಯೂ ಸಿ.ಸಿ ಕ್ಯಾಮೆರಾ ಅಳವಡಿಸುವುದು.
9. ಪೋಲಿಸ್ ಸಿಬ್ಬಂದಿಯವರು ರಾತ್ರಿ ಹೊತ್ತು ಬ್ಲಾಕ್ ಸ್ಪಾಟ್‌ಗಳಲ್ಲಿ ರೌಂಡ್ಸ್ ನಡೆಸುವುದು.
10. ವಾಣಿಜ್ಯ ಮಳಿಗೆಗಳು ಇರತಕ್ಕಂತ ವ್ಯಾಪ್ತಿಗೆ ಆಟೋಗಳು ತ್ಯಾಜ್ಯವನ್ನು ಸಂಗ್ರಹಿಸಲು 11 ಗಂಟೆಯ ನಂತರ ತೆರಳಿ ಸಂಗ್ರಹಿಸುವುದು ಹಾಗೂ ಇದರ ಬಗ್ಗೆ ಸೂಕ್ತ ನಿರ್ದೇಶನಗಳನ್ನು ಅಂಗಡಿ ಮಾಲೀಕರಿಗೆ ನೀಡುವುದು.

ಕಾರ್ಯದರ್ಶಿ ಹಾಗೂ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ – 145
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು ಹಾಗೂ
ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ – 145
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

<u>ಪ್ರತಿಯನ್ನು:-</u>

1) ಮಾನ್ಯ ಆಡಳಿತಗಾರರು ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
2) ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
3) ಮಾನ್ಯ ವಲಯ ಆಯುಕ್ತರುರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
4) ಮಾನ್ಯ ಜಂಟಿ ಆಯುಕ್ತರು (ದಕ್ಷಿಣ)ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
5) ತಂಡದ ಎಲ್ಲಾ ಸಿಬ್ಬಂಧಿರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
6) ಕಛೇರಿ ಕಡತಕ್ಕೆ.

Scanned with CamScanner